# ॥ ಭಗವದ್ಗೀತಾ ಲಾವಣಿ ॥

ಶ್ರೀಕೃಷ್ಣ ಜಯಶ್ರೀಕೃಷ್ಣ ಜಯಶ್ರೀಕೃಷ್ಣ ಜಯಶ್ರೀಕೃಷ್ಣ ।
ಶ್ರೀರಾಮ ಜಯಶ್ರೀರಾಮ ಜಯಶ್ರೀರಾಮ ಜಯಶ್ರೀರಾಮ ॥೧॥

ಧರ್ಮಕ್ಷೇತ್ರದೊಳು ಕರ್ಮವ ಮಾಡದ ಧರ್ಮನ ಅನುಜಗೆ ಶ್ರೀಕೃಷ್ಣ ।
ಧರ್ಮವ ಬೋಧಿಸಿ ಕರ್ಮವ ಮಾಡುವ ಮರ್ಮವನರುಹಿದ ಹರಿಕೃಷ್ಣ ॥೨॥

ಪಾರ್ಥನು ಸ್ವಜನಹಿತಾರ್ಥವ ಯುದ್ಧದ ಕ್ಷೇತ್ರದಿ ಚಿಂತಿಸುತಚ್ಯುತನ ।
ಪ್ರಾರ್ಥಿಸಿ ಯುದ್ಧದಿ ಸಾರ್ಥಕವೇನಪಕೀರ್ತಿಯು ತನಗೆನೆ ಹರಿಕೃಷ್ಣ ॥೩॥

ಪಾರ್ಥನೆ ಬಿಡುಬಿಡು ವ್ಯರ್ಥಪ್ರಲಾಪವ ಕೀರ್ತಿಯು ನಿನಗೆನಲಸುರಾರಿ ।
ಪಾರ್ಥನು ನಮಿಸಿ ಯಥಾರ್ಥವನರುಹಿ ಕೃತಾರ್ಥವಮಾಡೆನೆ ಹರಿಕೃಷ್ಣ ॥೪॥

ದೇಹವು ಅಸ್ಥಿರ ದೇಹಿಯು ನಿತ್ಯನು ಮೋಹಕಾಮಗಳ ದಾಹದಲಿ ।
ದೇಹಿಯು ಕರ್ಮದ ದೇಹವ ಪಡೆವನು ಸಾಹಸಿ ಕೇಳೆಂದ ಹರಿಕೃಷ್ಣ ॥೫॥

ವಿಷಯಾಪೇಕ್ಷೆಯು ವಿಷದ ಸಮಾನವು ವಶವಾಗದೆ ಸ್ಥಿರಮತಿಯಾಗು ।
ವಿಷಯೇಂದ್ರಿಯಗಳು ವಶದೊಳಗಿರುತಿರೆ ಯಶವಹುದೆಂದನು ಹರಿಕೃಷ್ಣ ॥೬॥

ಧರ್ಮನ ಅನುಜನೆ ಕರ್ಮದ ಮರ್ಮವ ಬ್ರಹ್ಮನೆ ಬಲ್ಲನು ಎಲ್ಲವನು ।
ಕರ್ಮಾಕರ್ಮವ ಬ್ರಹ್ಮಾರ್ಪಣವೆನೆ ನೆಮ್ಮದಿ ಎಂದನು ಹರಿಕೃಷ್ಣ ॥೭॥

ಮಾನವ ಜನುಮದಿ ಜ್ಞಾನಾಜ್ಞಾನದ ಜ್ಞಾನವ ತಿಳಿದು ಸುಮಾರ್ಗದಲಿ ।
ನೀನೇ ಗತಿ ಎನೆ ನಾನೇ ಸಲಹುವೆ ನೀನರಿ ಎಂದನು ಹರಿಕೃಷ್ಣ ॥೮॥

ಧರ್ಮಶಾಸ್ತ್ರಗಳ ಮರ್ಮವನರಿತ ಸುಕರ್ಮಯೋಗಿಗಳಿಗಭಯವನು ।
ಧರ್ಮವೆ ಕೊಡುವುದು ಧರ್ಮಸೂತ್ರಗಳ ಮರ್ಮವಿದೆಂದನು ಹರಿಕೃಷ್ಣ ॥೯॥

ಶ್ರದ್ಧೆಯು ತ್ರಿವಿಧವು ಬುದ್ಧಿಯ ವೃದ್ಧಿಯು ಶ್ರದ್ಧೆಯನನುಸರಿಸುತಲಿರಲು ।
ಶುದ್ಧದಿ ಬುದ್ಧಿಯ ತಿದ್ದಲು ಮೋಕ್ಷವು ಸಿದ್ಧವು ಎಂದನು ಹರಿಕೃಷ್ಣ ॥೧೦॥

ಕುಂತಿಯ ಪುತ್ರನೆ ಅಂತ್ಯದಿ ಚಿಂತಿಸುವಂತಹ ಪ್ರಾಪ್ತಿಯು ನಿಶ್ಚಯವು ।
ಸಂತತ ನೀ ಭಗವಂತನ ಚಿಂತಿಸೆ ಸಂತಸವೆಂದನು ಹರಿಕೃಷ್ಣ ॥೧೧॥

ಇಲ್ಲಿಹನಲ್ಲಿಹ ಸೊಲ್ಲದು ಸಲ್ಲದು ಎಲ್ಲೆಲ್ಲೂ ಇಹ ಎನ್ನೊಳಗೆ ।
ಎಲ್ಲವು ಇರುತಿರೆ ಸಲ್ಲಿಸೆ ಎಲ್ಲವ ಸಲ್ಲುವೆ ಎಂದನು ಹರಿಕೃಷ್ಣ ॥೧೨॥

ಭೋಗದ ಮನದಿಹ ರಾಗವ ಘನವೈರಾಗ್ಯಾಭ್ಯಾಸದಿ ನೀಗಿಸುವ ।
ತ್ಯಾಗಿಯು ಧ್ಯಾನದ ಯೋಗದಿ ಮೋಕ್ಷಕೆ ಪೋಗುವನೆಂದನು ಹರಿಕೃಷ್ಣ ॥೧೩॥

ಕ್ಷೇತ್ರಜ್ಞನು ನಾ ಕ್ಷೇತ್ರದಿ ವ್ಯಾಪ್ತನು ಕ್ಷೇತ್ರದ ಸೂತ್ರವು ಎನಲಿಹುದು ।
ಕ್ಷೇತ್ರಕ್ಷೇತ್ರಜ್ಞರ ಪಾತ್ರವ ಜ್ಞಾನದ ನೇತ್ರದಿ ತಿಳಿ ಎಂದ ಹರಿಕೃಷ್ಣ ॥೧೪॥

ಎನ್ನಯ ಹೊರತೊಂದನ್ಯವೆನ್ನುವುದು ಎನ್ನಯ ಸೂತ್ರದಲಿರದಿರಲು ।
ಎನ್ನನೆ ಗತಿ ಎಂದೆನ್ನುತ ಮನದೊಳಗೆನ್ನನೆ ಸ್ಮರಿಸೆಂದ ಹರಿಕೃಷ್ಣ ॥೧೫॥

ಮಿತ್ರನೆ ಲೋಕದ ಕರ್ತನು ನಾ ಸರ್ವದಿ ಪರಿವ್ಯಾಪ್ತನು ನಿಜವೆನುತ ।
ಚಿತ್ರವಿಚಿತ್ರ ಪವಿತ್ರದ ರೂಪವ ವಿಸ್ತರಿಸಿದನಾ ಹರಿಕೃಷ್ಣ ॥೧೬॥

ಪಾರ್ಥನೆ ಲೋಕಹಿತಾರ್ಥಕೆ ಭಕ್ತರು ಪ್ರಾರ್ಥಿಸಲವತರಿಸುವೆನೆನುತ ।
ಪಾರ್ಥಗೆ ತನ್ನಯ ಪೂರ್ತಿಸ್ವರೂಪದ ಮೂರ್ತಿಯ ತೋರಿದ ಹರಿಕೃಷ್ಣ ॥೧೭॥

ಮೂರುಗುಣಗಳಿಗೆ ಮಾರುಹೋಗುವವ ಜಾರಿಬೀಳುವನು ಜಗದೊಳಗೆ ।
ಮೂರುಗುಣಂಗಳ ಮೀರಿದರೆನ್ನನು ಸೇರುವರೆಂದನು ಹರಿಕೃಷ್ಣ ॥೧೮॥

ವಿಶ್ವದಿ ಇಹ ಸರ್ವಸ್ವವು ನಶ್ವರ ಈಶ್ವರನೇ ಗತಿ ಎನ್ನುತಲಿ ।
ಶಾಶ್ವತನಹ ಪುರುಷೋತ್ತಮನನು ನೀನಾಶ್ರಯಿಸೆಂದನು ಹರಿಕೃಷ್ಣ ॥೧೯॥

ಕೆಟ್ಟಗುಣವು ಯಮಪಟ್ಟಣಗಟ್ಟುತ ಹುಟ್ಟುಸಾವಿನೆಡೆಗಟ್ಟುವುದು ।
ಕೆಟ್ಟಗುಣಂಗಳ ಮೆಟ್ಟುತ ಶಾಸ್ತ್ರದ ಕಟ್ಟಳೆ ಪಿಡಿ ಎಂದ ಹರಿಕೃಷ್ಣ ॥೨೦॥

ಮುಕ್ತಿಗೆ ಸುಲಭವು ಭಕ್ತಿಯ ಮಾರ್ಗವು ಭಕ್ತರು ಎನಗತಿಪ್ರಿಯರೆನುತ ।
ಮುಕ್ತಿಯ ಹೊಂದುವ ಭಕ್ತಿಯ ಮುಕ್ತಿಯ ಯುಕ್ತದಿ ಪೇಳಿದ ಹರಿಕೃಷ್ಣ ॥೨೧॥

ಭೋಗದಿ ರೋಗವು ತ್ಯಾಗದಿ ಮೋಕ್ಷಕೆ ಭಾಗಿಯಾಗೆ ಶರಣಾಗೆನಲು ।
ಬಾಗುತ ಮೋಹವ ನೀಗುತಲಿದ್ದರೆ ಸಾಗಿದನರ್ಜುನ ಹರಿಕೃಷ್ಣ ॥೨೨॥

ಯೋಗೇಶ್ವರ ಹರಿ ಹಾಗು ಧನುರ್ಧರನಾಗಿಹ ಪಾರ್ಥನ ಜಾಗದಲಿ ।
ಯೋಗಿಗಳರಸನು ಬೇಗದಿ ಒದಗುವ ಆಗುವುದ್ಯೆ ಜಯಮಂಗಳವು ॥೨೩॥

ಮಂಗಳ ಮತ್ಸ್ಯಂಗೆ ಕೂರ್ಮವರಾಹಗೆ ನರಹರಿ ವಾಮನ ಭಾರ್ಗವಗೆ ।
ಮಂಗಳ ರಾಮಗೆ ಮಂಗಳ ಕೃಷ್ಣಗೆ ಬುದ್ಧ ಕಲ್ಕಿ ಶ್ರೀನಿವಾಸಂಗೆ ॥೨೪॥